**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ದಿನಾಂಕ 17 ನೇ ಮಾಹೆ ಅಕ್ಟೋಬರ್ 2023**

**<u>ಸಿ.ಸಿ.ಸಂ.976/2019</u>**

ಪಿರ್ಯಾದುದಾರರು : ರಾಜ್ಯದ ಪರ ಬೆಟ್ಟದಪುರ ಠಾಣಾ ಆರಕ್ಷಕರು

**ವಿರುದ್ಧ**

ಆರೋಪಿಗಳು :

1. ಪ್ರಕಾಶ.ಕೆ.ಸಿ,
ಬಿನ್ ಲೇಟ್ ಚೆನ್ನಬಸಪ್ಪ,
ವಯಸ್ಸು 60 ವರ್ಷ.

2. ಮಹಾದೇವಪ್ಪ ಉಃ ಬಾಬು,
ಬಿನ್ ಅಪ್ಪಣ್ಣ.ಕೆ.ಸಿ,
ವಯಸ್ಸು 40 ವರ್ಷ.

3. ಸವಿತ ಕೋಂ. ಮಹಾದೇವಪ್ಪ,
ವಯಸ್ಸು 32 ವರ್ಷ.

4. ಮಹೇಶ ಬಿನ್ ಸುಂದ್ರಪ್ಪ,
ವಯಸ್ಸು 30 ವರ್ಷ.

ಎಲ್ಲರ ವಾಸಃ ಕೆಳಗನಹಳ್ಳಿ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ತಿದ್ದುಪಡಿ ದೋಷಾರೋಪಣೆ</u>**

*ಶ್ರೀಮತಿ.ಶ್ವೇತ.ಜೆ., ಬಿ.ಕಾಂ., ಎಲ್.ಎಲ್.ಬಿ*, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಅಂದರೆ, 1 ರಿಂದ 4 ನೇ ಆರೋಪಿಗಳ ವಿರುದ್ದ ಮಾಡುವ ಆಪಾದನೆ ಏನೆಂದರೆ,

ಮೊದಲನೇಯದಾಗಿ, ದಿನಾಂಕ 01.02.2019 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ, ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು, ಕೆಳಗನಹಳ್ಳಿ ಗ್ರಾಮದಲ್ಲಿ ಚಾಸಾ.1 ಕೆ.ಹೆಚ್. ಪ್ರಭು ರವರ ತಾಯಿ ಮುತ್ತಮ್ಮ ರವರ ಬಾಬ್ತು

ಸರ್ವೆ ನಂಬರ್ 57 ರ ಜಮೀನಿಗೆ ಚಾಸಾ.1 ರವರು ಹದ್ದು ಬಸ್ತು ಮಾಡಿಕೊಳ್ಳಲು ಟ್ರೆಂಚ್ (ಹಳ್ಳ) ತೆಗೆಸುತ್ತಿರುವಾಗ 1 ರಿಂದ 4 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಪ್ರವೇಶ ಮಾಡಿರುತ್ತೀರಿ, ಆ ಮೂಲಕ 1 ರಿಂದ 4 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.447 ಸಹವಾಚಕ 34 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 4 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, 1 ನೇ ಆರೋಪಿತನು ಚಾಸಾ.1 ರವರಿಗೆ 'ಏನೋ ಬೋಳಿ ಮಗನೇ, ಎಷ್ಟೇ ಹೇಳಿದರೂ ನೀನು ಪದೇ ಪದೇ ಸರ್ವೆ ಮಾಡಿಸಿ, ನಮಗೆ ತೊಂದರೆ ಕೊಡ್ತಿಯಾ' ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ನಿಂದಿಸಿರುತ್ತೀರಿ, ಆ ಮೂಲಕ 1 ರಿಂದ 4 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ 34 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

1. ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 4 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, 2 ನೇ ಆರೋಪಿತನು ಚಾಸಾ.1 ರವರು ಮಂದೆ ಹೋಗದಂತೆ ತಬ್ಬಿ ಹಿಡಿದುಕೊಂಡು ಅವರಿಗೆ ಅಕ್ರಮ ತಡೆವುಂಟು ಮಾಡಿರುತ್ತೀರಿ, ಆ ಮೂಲಕ 1 ರಿಂದ 4 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ 341 ಸಹವಾಚಕ 34 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 4 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, 1 ರಿಂದ 3 ನೇ ಆರೋಪಿಗಳು ತಮ್ಮ ಕೈಗಳಿಂದ ಚಾಸಾ.1 ರವರ ಮೈಕೈಗೆ ಹೊಡೆದು ಸಾಮಾನ್ಯ

ಸ್ವರೂಪದ ನೋವುಂಟು ಮಾಡಿರುತ್ತೀರಿ, ಆ ಮೂಲಕ 1 ರಿಂದ 4 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.323 ಸಹವಾಚಕರ 34 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 4 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, 'ಇನ್ನೊಂದು ಸಾರಿ ಈ ಜಮಿನೀನ ವಿಚಾರಕ್ಕೆ ಬಂದರೆ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ' ಎಂದು ಚಾಸಾ.1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತೀರಿ, ಆ ಮೂಲಕ 1 ರಿಂದ 4 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 34 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿದ್ದೇನೆ.

**(ಶ್ವೇತ.ಜಿ)**
ಹೆಚ್ಚುವರಿ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ,
ಪಿರಿಯಾಪಟ್ಟಣ.